ಕರ್ನಾಟಕಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 01 ಇಎಸ್‌ಟಿ(10) 2025

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 09-07-2025

## ಪರಿಚಲನಾದೇಶ

ವಿಷಯ: ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯ್ಕೆಶ್ರೇಣಿ ಉಪನ್ಯಾಸಕರುಗಳಿಗೆ ಕರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ವೃತ್ತಿ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಡಿಟಿಇ 2025 ದಿನಾಂಕ:04-07-2025

******

ಉಲ್ಲೇಖದ ಆದೇಶದಲ್ಲಿ ಡಾ. ಮಂಜುನಾಥ. ಸಿ. ಟಿ, ಸಂಶೋಧನಾಧಿಕಾರಿ/ ಆಯ್ಕೆಶ್ರೇಣಿ ಉಪನ್ಯಾಸಕರು, , ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು, (ಪ್ರಸ್ತುತ ನಿಯೋಜನೆ ಮೇರೆಗೆ ಜಿ.ಆರ್.ಐ.ಸಿ.ಪಿ, ಬೆಂಗಳೂರು) ಇವರಿಗೆ ಕರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 6ನೇ ಎ ಐ ಸಿ ಟಿ ಇ ವೇತನಶ್ರೇಣಿ ರೂ. 37400-67000 + ಎ ಜಿ ಪಿ ರೂ. 9000 ರಿಂದ ಎ.ಜಿ.ಪಿ ರೂ. 10000 ಕ್ಕೆ ವೃತ್ತಿ ಪದೋನ್ನತಿ ನೀಡಿರುವ ಸರ್ಕಾರದ ಆದೇಶವನ್ನು ಸಂಬಂಧಪಟ್ಟ ಆಯ್ಕೆಶ್ರೇಣಿ ಉಪನ್ಯಾಸಕರುಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿ/ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಪರಿಚಯಿಸಲಾಗಿದೆ..

Digitally signed by
Prasanna H
Date: 15-07-2025
14:04:35

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ,

ಇವರಿಗೆ:-

1. ಸಂಬಂಧಪಟ್ಟ ಅಧಿಕಾರಿ/ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ;
2. ಸಂಬಂಧಪಟ್ಟ ಆಯ್ಕೆಶ್ರೇಣಿ ಉಪನ್ಯಾಸಕರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ (ಪ್ರಾಂಶುಪಾಲರ ಮುಖಾಂತರ)
3. ನಗದು ವಿಭಾಗ, ಆಯುಕ್ತರ ಕಛೇರಿ ತಾಂತ್ರಿಕ ಶಿಕ್ಷಣ ಇಲಾಖೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

ಪ್ರತಿ:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು;
2. ಮಹಾಲೇಖಪಾಲರು, ಎ&ಇ, (AAOGE-XI) ಬೆಂಗಳೂರು;
3. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು;
4. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
6. ಹೆಚ್ಚುವರಿ ಪ್ರತಿ ಕಡತಕ್ಕೆ

## ಕರ್ನಾಟಕ ಸರ್ಕಾರದ ನಡವಳಿಗಳು

10483667/25

**ವಿಷಯ:** ಡಾ.ಮಂಜುನಾಥ ಸಿ.ಟಿ., ಸಂಶೋಧನಾಧಿಕಾರಿ(ಆಯ್ಕೆ ಶ್ರೇಣಿ ಉಪನ್ಯಾಸಕರು, ಸಿ.ಪಿ.ವಿಭಾಗ), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್" ಯೋಜನೆಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.37400-67000 ರಲ್ಲಿ ಎಜಿಪಿ ರೂ.9000 ರಿಂದ ಎಜಿಪಿ ರೂ ರೂ.10000ಕ್ಕೆ ವೃತ್ತಿಪದೋನ್ನತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಎಐಸಿಟಿಇ ಅಧಿಸೂಚನೆ (Pay Scales-Diploma) ಸಂಖ್ಯೆ:F.No.37-3/Legal/2010, ದಿನಾಂಕ:05.03.2010.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 118 ಡಿಟಿಇ 2010, ದಿನಾಂಕ:31.03.2011.
3. ಎಐಸಿಟಿಇ ಅಧಿಸೂಚನೆ [CAS Regulation - 2012 (Diploma)] ಸಂಖ್ಯೆ:F.No.37-3/Legal/AICTE/2012, ದಿನಾಂಕ:08-11-2012.
4. ಎಐಸಿಟಿಇ ಅಧಿಸೂಚನೆ [Clarifications (Diploma/Degree] ಸಂಖ್ಯೆ:F.No.27/RIFD/ Pay Scale/01/2013-14 ದಿನಾಂಕ: 04-01-2016.
5. ಎಐಸಿಟಿಇ ಅಧಿಸೂಚನೆ F.No. 27-4/AICTE/RIFD/Pay Scale/2018-19, 20.05.2020.
6. ಸರ್ಕಾರದ ಆದೇಶ ಸಂಖ್ಯೆ: ಇಡಿ 167 ಡಿಟಿಇ 2017, ದಿನಾಂಕ: 10.11.2020.
7. ಆಯುಕ್ತಾಲಯದ ಕಡತ ಸಂಖ್ಯೆ: DTE-ADMI0EST(10)/1/2025 (E-1640220).

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ
ಸಂಖ್ಯೆ 379
ದಿನಾಂಕ 10 JUL 2025
BST-10
ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರ ಆಪ್ತ ಶಾಖೆ
ಸಂಖ್ಯೆ 804
ದಿನಾಂಕ 15/7/25

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿ ರವರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ 6ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳು, ವಿದ್ಯಾರ್ಹತೆ, ಕೆರಿಯರ್ ಅಡ್ವಾನ್ಸ್ಮೆಂಟ್ ಯೋಜನೆ ಸೌಲಭ್ಯಗಳು ಮತ್ತು ಇತರೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ:01.04.2011 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿರವರ ಅಧಿಸೂಚನೆಯಲ್ಲಿ, ಎಐಸಿಟಿಇ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ (ಡಿಪ್ಲೊಮಾ) ಸಂಸ್ಥೆಗಳಲ್ಲಿ ಎಐಸಿಟಿಇ ವೇತನ ಶ್ರೇಣಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ/ ಉಪನ್ಯಾಸಕರುಗಳಿಗೆ 'ಕೆರಿಯರ್ ಅಡ್ವಾನ್ಸ್ಮೆಂಟ್ ಸೌಲಭ್ಯ'ಗಳ ಮಂಜೂರಾತಿ ಕುರಿತಂತೆ "All India Council for Technical Education (Career Advancement Scheme for the Teachers and other Academic Staff in Technical Institutions) (Diploma) Regulations, 2012"ನ್ನು ದಿನಾಂಕ:08-11-2012 ರಿಂದ ಜಾರಿಗೊಳಿಸಲು ನಿಯಮಗಳನ್ನು ರೂಪಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿರವರು ಹೊರಡಿಸಿರುವ ಅಧಿಸೂಚನೆ "All India Council for Technical Education (Career Advancement scheme for the teachers and other academic staff in technical institutions) (Diploma) Regulations 2012" ರಲ್ಲಿ ಕೆಲವೊಂದು ಅಂಶಗಳ ಬಗ್ಗೆ ಸ್ಪಷ್ಟೀಕರಣ ನೀಡಿದ್ದು, ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ:38ರಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆಯಡಿ ವೃತ್ತಿ ಪದೋನ್ನತಿ

ಸೌಲಭ್ಯವನ್ನು ಮಂಜೂರು ಮಾಡುವಲ್ಲಿ ಎ.ಪಿ.ಐ ಸ್ಕೋರ್‌ನಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಲಾಗಿರುತ್ತದೆ. ಇದನ್ನು ಎಐಸಿಟಿಇ ಅಧೀನದಲ್ಲಿ ಬರುವ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸಲು ಸದರಿ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಎಐಸಿಟಿಇ, ಅಧಿಸೂಚನೆಯಲ್ಲಿ ತಾಂತ್ರಿಕ ವಿದ್ಯಾಸಂಸ್ಥೆಗಳ (ಡಿಪ್ಲೊಮಾ/ಪದವಿ) ಬೋಧಕರು ಹಾಗೂ ಇತರ ಅಕಾಡೆಮಿಕ್ ಸಿಬ್ಬಂದಿಗಳ ವಿದ್ಯಾರ್ಹತೆ, ವೇತನ ಶ್ರೇಣಿಗಳು, ಸೇವಾ ಷರತ್ತುಗಳು, ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಗಳು (CAS)/ಪದೋನ್ನತಿ ಮೊದಲಾದವುಗಳಿಗೆ ಸಂಬಂಧಿಸಿದಂತೆ 6ನೇ ವೇತನ ಆಯೋಗದಲ್ಲಿ ಉಂಟಾದ ಕೆಲವು ಗೊಂದಲಗಳ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (6)ರ ಆದೇಶದಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಆಯುಕ್ತಾಲಯದ ಏಕ ಕಡತದ ಪ್ರಸ್ತಾವನೆಯಲ್ಲಿ ದಿನಾಂಕ 02.01.2025 ರಿಂದ 27.01.2025ರ ಅವಧಿಯಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆಸಲಾದ ಸ್ಥಾನೀಕರಣ ಮತ್ತು ಸ್ಕ್ರೀನಿಂಗ್ ಸಮಿತಿಯು, ಡಾ.ಮಂಜುನಾಥ ಸಿ.ಟಿ., ಸಂಶೋಧನಾಧಿಕಾರಿ(ಆಯ್ಕೆ ಶ್ರೇಣಿ ಉಪನ್ಯಾಸಕರು), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್" ಯೋಜನೆಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.37400-67000 ರಲ್ಲಿ ಎಜಿಪಿ ರೂ.9000 ರಿಂದ ಎಜಿಪಿ ರೂ ರೂ.10000ಕ್ಕೆ ವೃತಿಪದೋನ್ನತಿಗೆ ಅರ್ಹರಾಗಿದ್ದಾರೆ ಎಂದು ಶಿಫಾರಸ್ಸು ಮಾಡಿದೆ. ಸಮಿತಿಯು ಈ ಶಿಫಾರಸ್ಸು ಮಾಡಿರುವ ಸಂದರ್ಭದಲ್ಲಿ ಸದರಿಯವರ ವಿದ್ಯಾರ್ಹತೆ, ಸೇವಾನುಭವ, ಅಲ್ಪಾವಧಿ ತರಬೇತಿ, ಎಪಿಐ ಅಂಕಗಳು ಹಾಗೂ ಎಐಸಿಟಿಇ ನಿಗದಿಪಡಿಸಿರುವ ಇತರ ಎಲ್ಲಾ ಮಾನದಂಡಗಳನ್ನು ಪರಿಶೀಲಿಸಿದ್ದು, ಸದರಿಯವರು ಎಲ್ಲಾ ಅರ್ಹತೆಗಳನ್ನು ಪೂರೈಸಿರುವುದು ದೃಢಪಟ್ಟಿದೆ. ಈ ಹಿನ್ನಲೆಯಲ್ಲಿ, ಸದರಿಯವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿಯಲ್ಲಿ ವೃತ್ತಿ ಪದೋನ್ನತಿ ಮಂಜೂರು ಮಾಡುವ ಬಗ್ಗೆ ಸೂಕ್ತ ಆದೇಶ ನೀಡುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಡಿಟಿಇ 2010, ದಿನಾಂಕ:31.03.2011ರಲ್ಲಿ ಸೇವೆಯಲ್ಲಿರುವ ಪಾಲಿಟೆಕ್ನಿಕ್ ಉಪನ್ಯಾಸಕರುಗಳು AGP ರೂ.10,000/-ಕ್ಕೆ ಅರ್ಹರಾಗಲು ಈ ಕೆಳಕಂಡ ಅರ್ಹತಾ ಮಾನದಂಡವನ್ನು ನಿಗದಿಪಡಿಸಲಾಗಿದೆ.

COMPLETING 3 YEARS OF SERVICE IN THE AGP OF RS.9000 AND POSSESSING A PH.D. DEGREE IN THE RELEVANT DISCIPLINE SHALL BE ELIGIBLE, SUBJECT TO OTHER CONDITIONS OF ACADEMIC PERFORMANCE AS LAID DOWN BY THE AICTE, SHALL BE PLACED IN THE PAY BAND OF RS.37400-67000 WITH AGP OF RS.10000.

ಹಾಗೂ ಎಐಸಿಟಿಇ ಕಾಲಕಾಲಕ್ಕೆ ನಿಗದಿಪಡಿಸಿರುವ ಇತರ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ (CAS) ವೃತ್ತಿಪದೋನ್ನತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಡಾ.ಮಂಜುನಾಥ ಸಿ.ಟಿ., ಸಂಶೋಧನಾಧಿಕಾರಿ(ಆಯ್ಕೆ ಶ್ರೇಣಿ ಉಪನ್ಯಾಸಕರು, ಸಿ.ಪಿ.ವಿಭಾಗ), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು 6ನೇ ಎಐಸಿಟಿಇ ವೇತನ ಶ್ರೇಣಿ ರೂ.37400-67000+ಎಜಿಪಿ ರೂ.9000/-ರಲ್ಲಿ 3 ವರ್ಷಗಳ ಸೇವೆಯನ್ನು ಹಾಗೂ ಎಐಸಿಟಿಇ ಕಾಲಕಾಲಕ್ಕೆ ನಿಗದಿಪಡಿಸಿರುವ ಇತರ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಬಗ್ಗೆ ಸ್ಥಾನೀಕರಣ ಸಮಿತಿಯು ಹಾಗೂ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಸದರಿಯವರಿಗೆ ಕೆರಿಯರ್ ಅಡ್ವಾನ್ಸ್ ಮೆಂಟ್ ಯೋಜನೆಯಡಿ (CAS), 6ನೇ

ಎಐಸಿಟಿಇ ವೇತನ ಶ್ರೇಣಿಯಲ್ಲಿ ಎಜಿಪಿ ರೂ.9000/-ರಿಂದ ಎಜಿಪಿ ರೂ.10000/-ಕ್ಕೆ ವೃತ್ತಿ ಪದೋನ್ನತಿ ಮಂಜೂರು ಮಾಡಲು ತೀರ್ಮಾನಿಸಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 47 ಡಿಟಿಇ 2025**
**ಬೆಂಗಳೂರು, ದಿನಾಂಕ: 4ನೇ ಜುಲೈ 2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಡಾ. ಮಂಜುನಾಥ ಸಿ.ಟಿ., ಸಂಶೋಧನಾಧಿಕಾರಿ (ಆಯ್ಕೆ ಶ್ರೇಣಿ ಉಪನ್ಯಾಸಕರು, ಸಿ.ಪಿ.ವಿಭಾಗ), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಅನ್ಯ ಕಾರ್ಯ ನಿಮಿತ್ತ- ಸರ್ಕಾರಿ ಜಿ.ಆರ್.ಐ.ಸಿ.ಪಿ. ಸಂಸ್ಥೆ ಬೆಂಗಳೂರು) ಇವರಿಗೆ ಕೆರಿಯರ್ ಅಡ್ವಾನ್ಸಮೆಂಟ್ ಯೋಜನೆಯಡಿ(CAS), 6ನೇ ಎಐಸಿಟಿಇ ವೇತನ ಶ್ರೇಣಿ ರೂ. ರೂ.37400-67000ರಲ್ಲಿ, ಎಜಿಪಿ ರೂ.9000/-ರಿಂದ ಎಜಿಪಿ ರೂ.10000/-ಕ್ಕೆ ಅರ್ಹತಾ ದಿನಾಂಕದಿಂದ ವೃತ್ತಿ ಪದೋನ್ನತಿ ನೀಡಿ, ಆರ್ಥಿಕ ಸೌಲಭ್ಯವನ್ನು ಭವಿಷ್ಯಾವರ್ತಿಯಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಿದೆ.

| ಕ್ರ. ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಎಜಿಪಿ ರೂ.9000 ಮಂಜೂರಾದ ದಿನಾಂಕ | ಪಿ.ಹೆಚ್‌ಡಿ ಪದವಿ ಪಡೆದ ದಿನಾಂಕ | ಎ.ಜಿ.ಪಿ ರೂ.10000 ಕ್ಕೆ ಅರ್ಹರಾಗಲು ಎಐಸಿಟಿಇ ನಿಗದಿಪಡಿಸಿರುವ ಎಲ್ಲಾ ಅರ್ಹತಾ ಮಾನದಂಡಗಳನ್ನು ಪೂರೈಸಿದ ದಿನಾಂಕ | ಎ.ಜಿ.ಪಿ 10000 ಕ್ಕೆ ಅರ್ಹತಾ ದಿನಾಂಕ |
|---|---|---|---|---|---|---|
| 1. | **ಡಾ. ಮಂಜುನಾಥ ಸಿ.ಟಿ.,** ಸಂಶೋಧನಾಧಿಕಾರಿ (ಆಯ್ಕೆ ಶ್ರೇಣಿ ಉಪನ್ಯಾಸಕರು), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ಅನ್ಯ ಕಾರ್ಯ ನಿಮಿತ್ತ- ಸರ್ಕಾರಿ ಜಿ.ಆರ್.ಐ.ಸಿ.ಪಿ. ಸಂಸ್ಥೆ ಬೆಂಗಳೂರು. | 22.02.1999 | 01.12.2015 | 19.09.2018 | 30.11.2018 | **01.12.2018** |

**ಷರತ್ತುಗಳು:**

1. 2010 ಮತ್ತು 2012ರ ಎಐಸಿಟಿಇ ರೆಗ್ಯುಲೇಷನ್‌ಗಳನ್ವಯ ಎ.ಜಿ.ಪಿ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.
2. ಎ.ಜಿ.ಪಿ ಮಂಜೂರಾತಿಯು ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸಿರುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
3. ಸದರಿಯವರು ಸಿಎಎಸ್ ಮುಂಬಡ್ತಿಗೆ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಹೊಂದಿರುವ ಬಗ್ಗೆ ಸ್ಥಾನೀಕರಣ ಆಯ್ಕೆ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ ಪರಿಗಣಿಸಲಾಗಿದೆ.
4. ವೃತ್ತಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೊಳಿಸುವುದು.
5. ಸದರಿಯವರಿಗೆ ವೇತನ ಶ್ರೇಣಿಯನ್ನು 7ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯಡಿ ಸಂವಾದಿಯಾಗಿ ನಿಗದಿಪಡಿಸುವುದು.
6. ಸದರಿಯವರ ಪ್ರಸ್ತಾವನೆಯಲ್ಲಿ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡು ಬಂದಲ್ಲಿ ಸದರಿಯವರುಗಳ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.
7. ಈ ಆದೇಶದನ್ವಯ ಮಂಜೂರು ಮಾಡಲಾಗುವ ಎ.ಜಿ.ಪಿ. ಸೌಲಭ್ಯವನ್ನು ಸ್ಥಳೀಯ/ ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ ಯಾವುದೇ ಅಸಂಗತಗಳು

ಕಂಡುಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

8. ಎಜಿಪಿ ಮಂಜೂರಾತಿ ವಿವರಗಳನ್ನು ಸದರಿ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎನ್. ಕುಮಾರ್ 04/07/2025

(ಎನ್. ಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4. ಸಂಬಂಧಪಟ್ಟ ಪ್ರಾಂಶುಪಾಲರು/ಆಯ್ಕೆ ಶ್ರೇಣಿ ಉಪನ್ಯಾಸಕರಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ).
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ.